# ನಾವು ಎತ್ತ ಸಾಗುತ್ತಲಿದ್ದೇವೆ ?*

'ಅಖಿಲ ಭಾರತ ಹಿಂದ್ ಮಜದೂರ್ ಪಂಚಾಯತ್'ನ ಈ ಸಮ್ಮೇಳನವು ನಮ್ಮ ರಾಷ್ಟ್ರ ಜೀವನದ ಒಂದು ತಿರುವನ್ನು ಎತ್ತಿ ತೋರಿಸುತ್ತದೆ. ತುರ್ತು ಪರಿಸ್ಥಿತಿಯ ಆ ಕರಾಳ ದಿನಗಳಲ್ಲಿ ಸರ್ವಾಧಿಕಾರಿಣಿಯ ಪತನ ಇಷ್ಟು ಸನ್ನಿಹಿತವಾಗಿರುತ್ತದೆಂದು ಯಾರು ತಾನೆ ಊಹಿಸಿದ್ದರು ? ನಮ್ಮ ಸಮ್ಮಾನದ ಮಿತ್ರ ಜಾರ್ಜ್ ಫರ್ನಾಂಡಿಸ್ ಅವರು ಸೆರೆಮನೆಯ ಕತ್ತಲು ಕೋಣೆಯಿಂದ ನೇರವಾಗಿ ಕೇಂದ್ರ ಮಂತ್ರಿ ಮಂಡಲದ ಸಭಾ ಭವನಕ್ಕೆ ತೆರಳಿದ್ದು ಒಂದು ಅದ್ವಿತೀಯ ಕ್ರಾಂತಿಯನ್ನು ನಾಟಕದ ರೀತಿಯಲ್ಲಿ ಎತ್ತಿ ತೋರಿಸುತ್ತದೆ. ಏಕೆಂದರೆ ಕ್ರಾಂತಿ ಮಾತ್ರವೇ ಒಬ್ಬ ಮನುಷ್ಯನನ್ನು ಸೆರೆಯಿಂದ ಸತ್ತೆಗೆ ಏರಿಸಬಲ್ಲದು. ಈ ಪವಾಡಕ್ಕೆ ಅರೆಹೊಟ್ಟೆಯ, ಅರೆಬಟ್ಟೆಯ ಅನಕ್ಷರಸ್ಥರಾದ ನಮ್ಮ ಜನತೆಗೆ—ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಉತ್ತರಭಾರತದ ನಮ್ಮ ಜನತೆಗೆ ನಮ್ಮ ರಾಷ್ಟ್ರ ಕೃತಜ್ಞವಾಗಿರಬೇಕು. ಅವರಿಗೆ ಆ ಬಗೆಯ ಚಾಣಾಕ್ಷ ದೃಷ್ಟಿ ಇರದೇ ಹೋಗಿದ್ದರೆ, ಇಲ್ಲಿರುವ ನಾವು ಬಹುತೇಕ ಮಂದಿ ಕನಿಷ್ಟ ಪಕ್ಷ ಸೆರೆಮನೆಗೆ ಮರಳುತ್ತಿದ್ದೆವು. ಇನ್ನೂ ದುರ್ದೆಸೆ ಒದಗಿದ್ದರೂ ಆಶ್ಚರ್ಯವಿರುತ್ತಿರಲಿಲ್ಲ. ಸರ್ವಾಧಿಕಾರ ಮತ್ತೊಮ್ಮೆ ಧಾಂ ಧೂಂ ಎಂದು ಮರಳುತ್ತಿತ್ತು.

ಗಟ್ಟಿಮುಟ್ಟಾದ ಸತ್ಯಸಂಗತಿ ಎಂದರೆ ಇದು. ಭಾರತದ ದಲಿತ ಶೋಷಿತ ಜನತೆ 26 ವರುಷಕಾಲ ಅನ್ನರಹಿತವಾದ ಸ್ವಾತಂತ್ರ್ಯವನ್ನು ಕಂಡುಂಡಿದ್ದರು 1975ನೇ ಜೂನ್ 25 ಕಾಳರಾತ್ರಿ ಶ್ರೀಮತಿ ಗಾಂಧಿ ಸ್ವಾತಂತ್ರ್ಯಕ್ಕೆ ಮರಣಾಂತಿಕ ಪ್ರಹಾರ ಹಾಕುವ ಎಷ್ಟೋ ಮೊದಲು ಅನ್ನವಿಲ್ಲದ ಸ್ವಾತಂತ್ರ್ಯದ ಬಗ್ಗೆ ಜನಮನದಲ್ಲಿ ತಿರಸ್ಕಾರ ಮನೆ ಮಾಡಿತ್ತು. ತುರ್ತುಪರಿಸ್ಥಿತಿಯನ್ನು ಕುರಿತು ಜನತೆಯಲ್ಲಿ ಕಂಡು ಬಂದ ಅಸಡ್ಡೆಗಾಗಿ ಕಣ್ಣೀರಿಡುವುದರಲ್ಲಿ ಅರ್ಥವಿಲ್ಲ. ಹಾಗೆಂದ ಮಾತ್ರಕ್ಕೆ ಒಂದು ತುಂಡು ಎಂಜಲು ಮೂಳೆಗಾಗಿ ಜನತಂತ್ರದ ಕೊಲೆಗೆ ಊಳಿಗದಾಳುಗಳಾಗಿ ನಿಂತ ಎ. ಐ. .ಟಿ ಯು. ಸಿ ಹಾಗೂ ಐ. ಎನ್. ಟಿ ಯು. ಸಿ. ಹಾಗೂ

---

*ಅಖಿಲಭಾರತ ಹಿಂದ್ ಮಜದೂರ್ ಪಂಚಾಯತ್, 1977ರ ಸಮ್ಮೇಳನದ ಅಧ್ಯಕ್ಷ ಭಾಷಣ

ಅಂಥ ಇತರ ಸಂಸ್ಥೆಗಳ ಪಾಪವನ್ನು ತೊಳೆಯಬೇಕೆಂಬ ಅರ್ಥವಲ್ಲ. ಆದ್ದರಿಂದ ಶ್ರೀಮತಿ ಗಾಂಧಿ ಸ್ವಾತಂತ್ರ್ಯಕ್ಕೆ ಬದಲು ಅನ್ನದ ಭರವಸೆ ನೀಡಿದ್ದಾಗ ಜನರನ್ನು ಕೆಲಕಾಲ ಆಕೆ ವಂಚಿಸಲು ಶಕ್ತಳಿದ್ದಳು. ‹ಏಕೆಂದರೆ ಜನತೆಗೆ ಅನ್ನರಹಿತ ಸ್ವಾತಂತ್ರ್ಯದ ಕಹಿ ಅನುಭವ ಇತ್ತು.

ಶತಶತಮಾನಗಳ ಕಷ್ಟಕಾರ್ಪಣ್ಯಗಳ ಆಳವಾದ ಅನುಭವದಿಂದ ಹುಟ್ಟಿದ ಅಂತ:ದೃಷ್ಟಿಯಿಂದ ತಮ್ಮನ್ನು ಶ್ರೀಮತಿ ಗಾಂಧಿ ವಂಚಿಸಿದರೆಂಬುದನ್ನು ಜನತೆ ಬಲು ಬೇಗನೇ ಕಂಡುಕೊಂಡರು ಈ ಅನುಭವದಿಂದಲೇ ಹುಟ್ಟಿತ್ತು. ಕಳೆದ ಲೋಕ ಸಭಾ ಚುನಾವಣೆಗಳಲ್ಲಿ ಹಾಗೂ ಅನಂತರ ಕೂಡಲೇ ಉತ್ತರ ಭಾರತದಲ್ಲಿ ನಡೆದ ವಿಧಾನ ಸಭಾ ಚುನಾವಣೆಗಳಲ್ಲಿ ಜನತಾ ಪಕ್ಷಕ್ಕೆ ಜನತೆ ನೀಡಿದ ‹ಅನ್ನ ಸಹಿತವಾದ ಸ್ವಾತಂತ್ರಕ್ಕೆ' ಮ್ಯಾಂಡೇಟ್. ಅಂತೆಯೇ ಅನ್ನ ಸಹಿತ ಸ್ವಾತಂತ್ರ ಸಾಧಿಸಬಲ್ಲ ಐತಿಹಾಸಿಕ ಸಾಧ್ಯತೆ ಹಾಗೂ ಜನತಾ ಪಕ್ಷ ವಿಫಲವಾದರೆ ಮತ್ತೊಮ್ಮೆ ಸ್ವಾತಂತ್ರ್ಯ ಸಹಿತ ಅನ್ನ ನೀಡುವ ಮತ್ತೊಂದು ಪ್ರಯೋಗದ ಸಾಧ್ಯತೆ ಎರಡೂ ಇಂದಿನ ಸ್ಥಿತಿಯಲ್ಲಿ ನಿಹಿತವಾಗಿದೆ. ಅಂತೆಯೇ ಸ್ವಾತಂತ್ರಕ್ಕೆ ಎರವಾಗದೆ ಅನ್ನ ನೀಡಬಲ್ಲಂಥ ಒಂದು ವಿಕಾಸದ ಮಾದರಿಯನ್ನು ರೂಪಿಸುವ ದೊಡ್ಡ ಹೊಣೆ ಜನತಾ ಪಾರ್ಟಿಯ ಮೇಲಿದೆ. ಇದು ಅತಿ ಕಠಿಣವಾದ ಪ್ರಯೋಗ ಎಂಬುದು ಗೊತ್ತೇ ಇದೆ. ಏಕೆಂದರೆ ನಮ್ಮ ಸಮಸ್ಯೆಗಳಿಗೆ ಸರಳ ಪರಿಹಾರಗಳನ್ನು ನೀಡ ಬಲ್ಲ ಸ್ಥಿತಿಯಲ್ಲಿ ನಾವಿಲ್ಲ ಅಥವಾ ಸ್ವಾತಂತ್ರ್ಯ ಸಹಿತ ಅನ್ನವನ್ನು ದೊರಕಿಸು ವಂಥ ರಾಷ್ಟ್ರೀಯ ವಿಕಾಸದ ಮಾದರಿಯನ್ನು ಬೇರೊಂದು ದೇಶದಿಂದ ಆಮದು ಮಾಡಿ ಕೊಳ್ಳಲೂ ಸಾಧ್ಯವಿಲ್ಲ. ವಿಕಾಸದ ಅಂಥ ದೇಶೀ ಮಾದರಿಯೊಂದನ್ನು ರೂಪಿಸಲು ಜನತಾ ಪಕ್ಷ ಹಾಗೂ ಜನತಾ ಸರ್ಕಾರಗಳ ಬಳಿ ಲಭ್ಯವಿರುವ ಎಲ್ಲ ಬೌದ್ಧಿಕ ಸಂಪತ್ತನ್ನು ತೊಡಗಿಸಬೇಕಾಗುತ್ತದೆ.

ಕೇಂದ್ರ ಜನತಾ ಸರ್ಕಾರದ ಈ ಹೆಜ್ಜೆ ಅಥವಾ ಆ ಹೆಜ್ಜೆ ಯಾವುದೋ ದಂತ ಗೋಪುರದ ಮಾನ ದಂಡದ ಪ್ರಕಾರ ನ್ಯಾಯವಾಗಿದೆಯೇ ಸಾಧುವಾಗಿದೆಯೇ ಎಂಬ ಒಣ ಚರ್ಚೆ ಕೆಲವು ಆಸಕ್ತ ವಲಯಗಳಲ್ಲಿ ನಿರಾತಂಕವಾಗಿ ಸಾಗುತ್ತಿದೆ. ಉತ್ತರ ಭಾರತದ ಕೆಲವು ವಿಧಾನ ಸಭೆಗಳ ವಿಸರ್ಜನೆ, ವಿಚಾರಣಾ ಆಯೋಗಗಳ ನೇಮು ಕ, ಬರೋಡ ಡೈನಾಮೈಟ್ ಮೊಕದ್ದಮೆಯ ವಾಪಸಾತಿ ಇಂಥ ಕೆಲವು ವಿಷಯ್ಯ ಗಳನ್ನು ಕುರಿತದ್ದು ಈ ಚರ್ಚೆ. ತುರ್ತು ಪರಿಸ್ಥಿತಿಯಲ್ಲಿ ತಮ್ಮ ಶುಷ್ಕಪಾಂಡಿತ್ಯದ ಚಿಲ್ಲರೆ ಅಂಗಡಿಗೆ ಬೀಗ ಹಾಕಿ ಮೂಲೆ ಸೇರಿದ್ದವರೆಲ್ಲ ಮತ್ತೆ ಬಾಗಿಲು ತೆರೆ ದು ತಮ್ಮ ವೃತ್ತಿ ಆರಂಭಿಸಿದ್ದಾರೆಂದು ಕಾಣುತ್ತದೆ. ಇಂತಹ ಕುತರ್ಕ ಪಂಡಿತ

ರಿಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುವುದೂ ಕೇಂದ್ರ ಜನತಾ ಸರ್ಕಾರಕ್ಕೂ ನೆನಪು ಮಾಡಿ ಕೊಡುವುದೂ ಅಗತ್ಯವೆಂದು ಕಾಣುತ್ತದೆ. ಅದೇನೆಂದರೆ ಸಫಲ ಕ್ರಾಂತಿಗಳು ತಮ್ಮದೇ ಆದ ಸಿಂಧುತ್ವ ಪಡೆದಿರುತ್ತವೆ. ಆದರಿಂದ ಜನರು ಜನತೆ ಸರ್ಕಾರಕ್ಕೆ ನೀಡಿರುವ ಅನ್ನಸಹಿತ ಸ್ವಾತಂತ್ರ್ಯದ ಮ್ಯಾಂಡೇಟನ್ನು ಸಾಧಿಸಲು ಅಗತ್ಯವೆನಿಸುವ ಎಲ್ಲ ಕ್ರಮಗಳೂ ಸಿಂಧು.

ಇಲ್ಲಿ ಒಂದು ಮಾತನ್ನು ವಿಶೇಷವಾಗಿ ಒತ್ತಿ ಹೇಳಬೇಕು. ತನ್ನ ನೀತಿಗಳು ಏನೇ ಆಗಿರಲಿ ಆ ನೀತಿಗಳನ್ನು ಜನತಾ ಸರ್ಕಾರ ಈ ಒಣ ನಿಯಮನಿಷ್ಠೆಯ ಪ್ರತಿಷ್ಠೆ ಪ್ರಜ್ಞೆಯ ತಕರಾರು ಮನಸ್ಸಿನ ನೌಕರಶಾಹಿಯ ಮುಖಾಂತರ ಹೇಗೆ ಕಾರ್ಯಾನ್ವಯ ಮಾಡುತ್ತದೆ? ಉದಾಹರಣೆಗೆ ಹರಿಜನರ ಮೇಲೆ ನಡೆಯುತ್ತಿರುವ ಹಲ್ಲೆಗಳನ್ನು ಕುರಿತು ಮತ್ತು ಔದ್ಯೋಗಿಕ ಅಶಾಂತಿಯನ್ನು ಕುರಿತು ಸಹಜವಾಗಿಯೇ ತುಂಬ ಕಳವಳವಿದೆ. ಆದರೆ ಈಗಿರತಕ್ಕ ಆಡಳಿತ ಯಂತ್ರದ ಮೂಲಕ ಈ ಸಮಸ್ಯೆಗಳನ್ನು ಸರ್ಕಾರ ಹೇಗೆ ಬಿಡಿಸುತ್ತದೆ? ನಮ್ಮ ಮಂತ್ರಿಗಳನ್ನು ವಾಸ್ತವಿಕ ಜಗತ್ತಿನಿಂದ ಬೇರ್ಪಡಿಸಿ ಇಡಲು ನೌಕರಶಾಹಿ ಪ್ರಯತ್ನಿಸುತ್ತಿದೆ. ಹೀಗಾದರೆ. ಅನತಿಕಾಲದಲ್ಲಿಯೇ ನಮ್ಮ ಮಂತ್ರಿಗಳಿಗೆ ಸಾಮಾನ್ಯ ಜನತೆಯ ಆಶೆ ಆಕಾಂಕ್ಷೆ, ಮನೋಧರ್ಮ, ಕಷ್ಟ ಸುಖಗಳ ಬಗ್ಗೆ ನೇರ ತಿಳಿವಳಿಕೆಯೇ ಇರಲಾರದು. ಇದನ್ನೆಲ್ಲಾ ಸಿಬ್ಬಂದಿ ಮುಖಾಂತರ ತಿಳಿದುಕೊಳ್ಳಬೇಕಾಗುತ್ತದೆ. ನಮ್ಮ ಆಡಳಿತ ವೈಖರಿ ವಿಚಿತ್ರ. ಸರ್ಕಾರಿ ನೌಕರರ ನಡವಳಿಕೆಯ ನಿಯಮಗಳು ಸರ್ಕಾರಿ ನೌಕರರು ಪ್ರಾಮಾಣಿಕ ವಿಚಾರಗಳನ್ನು ವ್ಯಕ್ತಪಡಿಸುವುದನ್ನೂ ದುರ್ವರ್ತನೆ ಎಂದು ಪರಿಭಾಷೆ ಮಾಡಿ ಪ್ರತಿಬಂಧಿಸುತ್ತವೆ. ಆದರೆ ಸರ್ಕಾರಿ ನಿರ್ಧಾರಗಳು ಕಾರ್ಯಗತ ಆಗುವುದನ್ನು ತಡೆಯಲು ಅಥವ ಅವುಗಳನ್ನು ವಿಕೃತ ಗೊಳಿಸಲು ನಡೆಸುವ ನಿಧಾನ ದ್ರೋಹ ಅತಿಕುಶಲ ತಂತ್ರಗಳು, ಕಾಗದ ಪತ್ರಗಳಲ್ಲಿ ನಡೆಸುವ ವಿವಿಧ ಪಿತೂರಿಗಳನ್ನು ದುರ್ವರ್ತನೆ ಎಂದು ಪರಿಭಾವಿಸುವುದಿಲ್ಲ, ಕೇಂದ್ರ ಹಾಗೂ ರಾಜ್ಯದ ಜನತಾ ಸರ್ಕಾರಗಳು ನೌಕರಶಾಹಿಯನ್ನು ಜನತಾ ವಿಚಾರಧಾರೆಗೆ ಎಳೆದು ತರಲು ತ್ವರಿತವಾಗಿ ಏನಾದರೂ ಮಾಡಲೇಬೇಕು. ಕಾರ್ಯಪಾಲಿಕೆಯಲ್ಲಿ ಅಮೂಲಾಗ್ರ ಪರಿವರ್ತನೆ ಆದ ಹೊರತೂ ಅರ್ಥಪೂರ್ಣವಾದ ಯಾವ ಕಾರ್ಯಕ್ರಮವನ್ನೂ ಜಾರಿ ಮಾಡಲು ಅಸಾಧ್ಯ ಎಂಬ ಕಟುಸತ್ಯವನ್ನು ಅವರು ಮನಗಾಣಬೇಕು. ಇದು ಜರೂರಾದ ಕಾರ್ಯ. ಜನತಾ ಪಾರ್ಟಿಯನ್ನು ಅಧಿಕಾರದಲ್ಲಿ ಕುಳ್ಳಿರಿಸಿದ ಕ್ರಾಂತಿ ಇಂಥ ಪರಿವರ್ತನೆ ಮಾಡುವ ನೈತಿಕ ಅಧಿಕಾರವನ್ನು ನೀಡಿದೆ.

ಜನತಾ ಪಕ್ಷದ ವಿಜಯ ಭಾರಿ ನಿರೀಕ್ಷೆಯನ್ನು ಬಡಿದೆಬ್ಬಿಸಿದೆ. ಆದರಲ್ಲೂ

ಉದ್ಯೋಗ ಪೂರೈಕೆ ಹಾಗೂ ಧಾರಣೆವಾಸಿ—ಈ ಎರಡೂ ಕ್ಷೇತ್ರಗಳಲ್ಲಿ. ಆದರೆ ಮೂಲಭೂತ ಆರ್ಥಿಕ ನೀತಿಗಳನ್ನು ಆಮೂಲಾಗ್ರವಾಗಿ ಬದಲಾಯಿಸಿದ ಹೊರತೂ ಈ ಎರಡು ಸಮಸ್ಯೆಗಳನ್ನು ನಾವು ಎದುರಿಸಲಾರೆವು. ಕಾರ್ಮಿಕ ವರ್ಗಕ್ಕೆ ನೇರವಾಗಿ ಸಂಬಂಧಿಸಿದ ಗಹನವಾದ ಆಸಕ್ತಿ ಇರುವ ಎರಡು ಸಮಸ್ಯೆಗಳು ಇವು. ಈ ಸಮಸ್ಯೆಗಳ ಬಗ್ಗೆ ಸಮಗ್ರ ಕಲ್ಪನೆ ಇರುವ ಶ್ರೀ ಜಾರ್ಜ್‌ಫರ್ನಾಂಡೀಸ್ ಉದ್ಯೋಗ ಖಾತೆ ಮಂತ್ರಿ ಆಗಿರುವುದು ನಮಗೆ ಸಂತೋಷ ನೀಡಿದೆ. ಅಗತ್ಯವಾದಷ್ಟು ನೌಕರಿಗಳನ್ನು ಉತ್ಪತ್ತಿ ಮಾಡಬಲ್ಲ, ದಾರುಣವಾದ ದಾರಿದ್ರ್ಯದಲ್ಲಿ ಮುಳುಗಿರುವ ದಲಿತ ಶೋಷಿತರ ಜೀವನ ಮಟ್ಟವನ್ನು ಮೇಲೆತ್ತಬಲ್ಲ ಬಗೆಯ ಅಭಿವೃದ್ಧಿಯ ಮಾದರಿಯೊಂದನ್ನು ಸರ್ಕಾರ ರೂಪಿಸಬೇಕಾಗಿದೆ. ಅದು "ಒಟ್ಟು ರಾಷ್ಟ್ರೀಯ ಉತ್ಪತ್ತಿ" ಎಂಬ ಕ್ಷುದ್ರ ದೇವತೆಯ ಆರಾಧನೆಯನ್ನು ನಿಲ್ಲಿಸಬೇಕು. ಕಳೆದ ಮೂವತ್ತು ವರುಷಗಳಲ್ಲಿ ನಮ್ಮ ಅಗತ್ಯಗಳಿಗೂ ನಮ್ಮ ಸ್ಥಿತಿಗತಿಗಳಿಗೂ ತಾಳಮೇಳವೇ ಇಲ್ಲದಂಥ ಒಂದು ಅಭಿವೃದ್ಧಿಯ ಮಾದರಿಯನ್ನು ಆರಿಸಿಕೊಂಡು ಅಪಾರ ಸಂಪತ್ತು ಹಾಗೂ ಅಮೂಲ್ಯ ಸಮಯವನ್ನು ಪೋಲುಮಾಡಲಾಯಿತು. ಈ ಅವಧಿಯಲ್ಲಿ ಗುತ್ತೇದಾರಿ ಮನೆತನಗಳು ಕೊಬ್ಬಿದವು. ಸಾರ್ವಜನಿಕ ವಲಯ ಅವರ ಮನೆತನಗಳ ಕೈಂಕರ್ಯಮಾಡಿವವು. ನಿರುದ್ಯೋಗ ಉಲ್ಬಣಿಸಿ ಇಂದು ಹದ್ದು ಮೀರಿದೆ. ಜನತೆಯ ಅಗತ್ಯಗಳ ಪೂರೈಕೆಯ ಬದಲು ಎಲ್ಲ ಬಗೆಯ ಮೋಜಿನ ಉದ್ಯಮಗಳು ಬೆಳೆದವು. ಈ ಎಲ್ಲದರ ವಿರುದ್ಧ ಪ್ರತಿಭಟನೆಯ ಸೊಲ್ಲು ಎತ್ತಿದಾಗ, ಅದನ್ನು ಪೊಳ್ಳು ಪ್ರಗತಿಯ ದೊಡ್ಡ ಹುಯಿಲೆಬ್ಬಿಸಿ ಮರೆಮಾಚಲಾಯಿತು. ನಮಗೆ ಸಾರ್ವಜನಿಕ ಕ್ಷೇತ್ರಬೇಕು. ಅದು ಪ್ರಬಲವೂ ವಿಶಾಲ ತಳಹದಿಯದೂ ಆಗಿರಬೇಕು. ಅದು ಜನತೆಯ ಅಗತ್ಯವನ್ನು ಪೂರೈಸಬೇಕು. ಬಂಡವಾಳಷಾಹರ ನೌಕರಷಾಹರ ಹಿತವನ್ನಲ್ಲ. ಕೆಲವು ಅಗತ್ಯವಾದ ಕೀಲಕಪ್ರಾಯ ಉದ್ಯಮಗಳನ್ನು ಸ್ಥಾಪಿಸುವಾಗ, ಜೊತೆಗೇ ಜನರಿಗೆ ನೌಕರಿ ಒದಗಿಸತಕ್ಕ ಅವರ ಜೀವನ ಮಟ್ಟ ಏರಿಸತಕ್ಕ ರೀತಿಯ ಔದ್ಯೋಗೀಕರಣ ನಾನಾ ಲೋಟದಿಂದ ಮುಂದುವರಿಯಬೇಕು. ಜನತೆಗೆ ಕನಿಷ್ಠ ಅಗತ್ಯಗಳನ್ನು ಪೂರೈಸಿ ಅವರಲ್ಲಿ ಸಮಾನತೆ ಸಾಧಿಸಲು ಕೃಷಿ ಉದ್ಯೋಗಗಳನ್ನು ಆಧುನೀಕರಿಸಬೇಕು. ಆಧುನೀಕರಣ ಎಂದರೆ ಪಾಶ್ಚಾತ್ಯೀಕರಣ ಅಲ್ಲ. ಭಾರತದ ಅಗತ್ಯಗಳಿಗೆ ಹಾಗೂ ಸ್ಥಿತಿಗತಿಗಳಿಗೆ ಅನುಗುಣವಾದ ಮತ್ತೊಂದು ಬಗೆಯ ಆಧುನೀಕರಣದ ಮಾದರಿ ಇರಬೇಕು. ಬ್ರಿಟಿಷರ ಕಾಲದಲ್ಲಿ ಪ್ರಾರಂಭವಾದ ಕರಕುಶಲ ಸರಕುಗಳ ಉತ್ಪಾದನಾ ವ್ಯವಸ್ಥೆಯನ್ನು ಕಾಂಗ್ರೆಸ್ ಪ್ರಶಾಸನ ತನ್ನ ಮೂವತ್ತು ವರುಷಗಳ ಆಡಳಿತದಲ್ಲಿ ನಿರಂತರವಾಗಿ ಮುಂದುವರಿಸಿತು. ಲಕ್ಷಾಂತರ ಜನ ಬಡಗಿಗಳು, ಚಮ್ಮಾರರು, ಕಮ್ಮಾರರು

ಲೋಹಕಾರರು ನಿರುದ್ಯೋಗಿಗಳಾಗುವಂತಹ ಪ್ಲಾಸ್ಟಿಕ್ ಉದ್ಯೋಗವನ್ನು ಹದ್ದು ಮೀರಿ ಬೆಳೆಯಗೊಟ್ಟು ಅವರ ಕಲೆಗಳನ್ನು ವಸ್ತು ಸಂಗ್ರಹಾಲಯದ ನಮೂನೆ ಬಾಬುಗಳನ್ನಾಗಿ ಉಳಿಸಿಕೊಳ್ಳುವುದು ವಿಪರ್ಯಾಸದ ಪರಮಾವಧಿ. ಹೊಸದಾಗಿ ನಿರೂಪಿಸಿದ ಜನರ ಅಗತ್ಯಗಳು ಹಾಗೂ ಹೊಸದಾಗಿ ಗೊತ್ತು ಪಡಿಸಿದ ಆದ್ಯತೆಗಳ ಮೇಲೆ ಆಧಾರಪಟ್ಟು ಹೊಸದೊಂದು ಅಭಿವೃದ್ಧಿಯ ಮಾದರಿಯನ್ನು ಸರ್ಕಾರ ರೂಪಿಸುವುದೆಂದು ಆಶಿಸೋಣ.

ಹಾಗೆಯೇ ಬೆಲೆಗಳು ವರಮಾನಗಳು ಮತ್ತು ವೇತನಗಳ ಬಗ್ಗೆ ನಿರ್ದಿಷ್ಟವಾದ ನೀತಿ ರೂಪಿಸಬೇಕು. ಕ್ರಯಶಕ್ತಿಯನ್ನು ಗಮನದಲ್ಲಿಟ್ಟುಕೊಂಡರೆ ಸಾಧಾರಣ ಕಾರ್ಮಿಕನ ಜೀವನ ಮಟ್ಟ ಕಳೆದ ಮೂವತ್ತು ವರುಷಗಳಲ್ಲಿ ಕಿಂಚಿತ್ತಾದರೂ ಮೇಲೆ ಏರಿದೆಯೇ ಎಂಬುದು ಅನುಮಾನಾಸ್ಪದ. ಸರ್ಕಾರ ಧಾರಣೆಗಳನ್ನು ನಿಯಂತ್ರಿಸುವುದಾಗಿ ಮಾತುಕೊಟ್ಟಿದೆ. ಆದರೆ ಅನೇಕ ಸರಕುಗಳ ಬೆಲೆಗಳು ಏರುತ್ತಿವೆ ಬೆಲೆ ಇಳಿಸಬೇಕೆಂದು ವರ್ತಕವೃಂದಕ್ಕೆ ಮಾಡಿಕೊಳ್ಳುವ ಮನವಿ ಚಿರತೆಗೆ ತನ್ನ ಬಣ್ಣ ಬದಲಾಯಿಸಲು ಮಾಡಿಕೊಳ್ಳುವ ಮನವಿಯಂತೆ ನಿರರ್ಥಕ. ನೀತಿಗಳಲ್ಲಿ ಅಗತ್ಯವಾದ ಮಾರ್ಪಾಟುಗಳು ಹಾಗೂ ಜನತೆಗೆ ಕಾಳಸಂತೆಕೋರರು ಮತ್ತು ದಾಸ್ತಾನುಗಾರರ ವಿರುದ್ಧ ದೃಢವಾದ ಕ್ರಮಗಳಿಂದ ಮಾತ್ರ ಬೆಲೆಗಳ ನಿಯಂತ್ರಣ ಸಾಧ್ಯ. ಈ ಸಮಸ್ಯೆಯ ಬಗ್ಗೆ ತಕ್ಷಣ ಕೆಲವು ಉಗ್ರ ಕ್ರಮಗಳು ಅತ್ಯಗತ್ಯ. ಇಲ್ಲವಾದರೆ ಸರ್ಕಾರದ ನಿಯತ್ತಿನಲ್ಲಿ ಜನರ ನಂಬಿಕೆ ಕರಗಿ ಹೋಗುತ್ತದೆ. ಕಾಳಸಂತೆ ಕೋರರು ದಾಸ್ತಾನುಕೋರರು ಹಾಗೂ ಬಂಡವಾಳಗಾರರು ಲೂಟಿ ಮಾಡುತ್ತಿದ್ದಾರೆ. ಜನತೆ ಪರಿಹಾರಕ್ಕಾಗಿ ಹಾಹಾಕಾರ ಮಾಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಮಸ್ಯೆಯನ್ನು ಎತ್ತಬೇಕು. ಕೇಂದ್ರ ಜನತಾ ಸರ್ಕಾರ ಕಾರ್ಮಿಕರಿಂದ ಏನನ್ನು ನಿರೀಕ್ಷಿಸುತ್ತದೆ? ನೀತಿಗಳನ್ನು ನಿರೂಪಿಸುವುದರಲ್ಲಿ ಹಾಗೂ ಕಾರ್ಯಗತ ಗೊಳಿಸುವುದರಲ್ಲಿ ಕಾರ್ಮಿಕರ ಸಹಕಾರ ಬೇಕೆ ಅಥವ ನಿರೂಪಿತ ಕಾರ್ಯಕ್ರಮಗಳನ್ನು ಕಾರ್ಯಗತ ಗೊಳಿಸುವುದರಲ್ಲಿ ಮಾತ್ರ ಸಹಕಾರ ಬೇಕೆ? ಎರಡು ಬಗೆಯ ಸಹಕಾರಗಳ ವ್ಯಾಪ್ತಿ ಹಾಗೂ ಪರಿಣಾಮ ಬೇರೆ ಬೇರೆ. ಜನತಾ ಪಕ್ಷದಂತಹ ಬಹುವರ್ಗೀಯ ಪಕ್ಷ ಕಾರ್ಮಿಕರಿಗೆ ನೀತಿ ರೂಪಿಸುವುದರಲ್ಲಿ ಸಹ ಹಿರಿಯ ಪಾಲನ್ನು ನೀಡುವುದೆಂದು ಯಾರೂ ನಿರೀಕ್ಷಿಸಬೇಕಾಗಿಲ್ಲ. ಅದರೂ ಸಾಧ್ಯವಾದಷ್ಟು ಮಟ್ಟಿಗೆ ನೀತಿ ನಿರೂಪಣೆ ಮತ್ತು ಕಾರ್ಯಾನ್ವಯದ ಉಸ್ತುವಾರಿಗಾಗಿ ಕಾರ್ಮಿಕರ ಪ್ರಾತಿನಿಧ್ಯವುಳ್ಳ ಸೂಕ್ತವಾದ

ಒಂದು ಸ್ಥಾಯೀ ವ್ಯವಸ್ಥೆ ಏರ್ಪಟ್ಟರೆ ಎಲ್ಲರಿಗೂ ಒಳಿತು.

ಮುಖ್ಯ ಸಮಸ್ಯೆಗಳ ಬಗ್ಗೆ ಹಂಗಾಮಿ ನಿರ್ಣಯಗಳನ್ನು ಕೈಗೊಳ್ಳಬಾರದೆಂದು ನಾನು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತೇನೆ. ಉದಾಹರಣೆಗೆ ಬೋನಸ್ ಬಗ್ಗೆ ಸರ್ಕಾರ ಕಿರಾಣಿ ತೀರ್ಮಾನಗಳ ಬದಲು ಸಮಗ್ರ ನಿರ್ಣಯ ಕೈಗೊಳ್ಳಬೇಕಾಗುತ್ತದೆ. ಕಾರ್ಮಿಕ ವರ್ಗದ ಪ್ರತಿಯೊಂದು ವಿಭಾಗವೂ ಬೇರೆ ಬೇರೆಯಾಗಿ ಬಿಡಿಬಿಡಿಯಾಗಿ ಚಳುವಳಿ ನಡೆಸಿ ಬೋನಸ್ ಪಡೆಯಬೇಕೇನು ? ಸಕಾರಣಗಳಿಗಾಗಿ ಚಳುವಳಿ ನಡೆಸಲಾರದ ವಿಭಾಗದ ಕಾರ್ಮಿಕರು ಬೋನಸ್ ಪಡೆಯಬಾರದೇನು? ಬೋನಸ್ ತಡೆಹಿಡಿದ ಸಂಬಳ ಎಂಬ ಕಲ್ಪನೆಗೆ ಕಟ್ಟು ಬಿದ್ದವರು ಹಿಂದೆ ಹೋಗುವುದು ಅಸಾಧ್ಯ-ಅನ್ಯಾಯ. ಸರ್ವೋತ್ತಮ ಮಾರ್ಗವೆಂದರೆ ಎಲ್ಲ ನೌಕರರಿಗೂ ಕನಿಷ್ಟ ಬೋನಸ್ ನೀಡುವುದು ಅಂದರೆ 12 ತಿಂಗಳ ಕೆಲಸಕ್ಕೆ 13ತಿಂಗಳ ಸಂಬಳ ನೀಡುವುದು. ಅನಂತರ ಲಾಭದ ಪಾಲುಗಾರಿಕೆಯಾಗಿ ಒಂದು ಬೋನಸ್ ಸೂತ್ರ ಕಂಡುಹಿಡಿಯುವುದು. ಕೆಲಸದಿಂದ ಉಚ್ಚಾಟಿಸಲಾದ ಕಾರ್ಮಿಕರ ಪುನರ್‌ನೇಮಕಾತಿ ಬಗ್ಗೆ ಕೂಡ ರೈಲ್ವೆ ಹಾಗೂ ಅಂಚೆ ಮಂತ್ರಿಗಳು ನಿರ್ಣಯ ಕೈಗೊಂಡರೇ ವಿನಃ ಇಡೀ ಸರ್ಕಾರ ಸಮಗ್ರ ನಿರ್ಣಯ ಕೈಗೊಳ್ಳಲಿಲ್ಲ.

ಕಾರ್ಮಿಕರ ಕಾನೂನು ಸಂಹಿತೆಯ ಸಮಗ್ರ ವಿಮರ್ಶೆಯಿಂದ ಉದ್ಯೋಗ ಬಾಂಧವ್ಯದ ಶಾಸನಗಳಲ್ಲಿ ಮೂಲಭೂತ ಪರಿವರ್ತನೆ ಆಗುತ್ತದೆಂದು ಅದರ ಪರಿಣಾಮವಾಗಿ ಕಾರ್ಮಿಕ ಚಳುವಳಿ ಹೋರಾಟ ಶೀಲವೂ ಜನತಾಂತ್ರಿಕವೂ ಸ್ವಾವಲಂಬಿಯೂ ಆಗುತ್ತದೆಂದು ನಿರೀಕ್ಷಿಸೋಣ. ವಿಶೇಷತಃ ಆಡಳಿತದಲ್ಲಿ ಕಾರ್ಮಿಕರ ಪಾತ್ರ, ಕಾರ್ಮಿಕರ ರಹಸ್ಯ ಮತದಾನದ ಮೂಲಕ, ಸಾಮೂಹಿಕ ಸಂಧಾನಕರ್ತನ ಆಯ್ಕೆ, ಕಾರ್ಮಿಕ ವಿವಾದಗಳ ಶೀಘ್ರ ಇತ್ಯರ್ಥ ಇಂತಹ ಮುಖ್ಯ ಸಮಸ್ಯೆಗಳು ನಿಯೋಜಿತ ಕಾನೂನು ತಿದ್ದುಪಡಿ ಮೂಲಕ ಅಂತಿಮವಾಗಿ ಬಗೆಹರಿಯುತ್ತದೆಂದು ಆಶಿಸೋಣ. ಈಗ ಅಗತ್ಯವಾದುದು ಅಲ್ಲೊಂದು ಇಲ್ಲೊಂದು ಸಣ್ಣ ಬದಲಾವಣೆ ಅಲ್ಲ, ಔದ್ಯೋಗಿಕ ಬಾಂಧವ್ಯಕ್ಕೆ ಹೊಸ ತಿರುವು.

ಕೇಂದ್ರ ಜನತಾ ಸರ್ಕಾರ ಬಡಜನತೆಗೆ ನಿಜವಾದ ಪರಿಹಾರ ನೀಡಬಲ್ಲ ಒಂದು ಕ್ಷೇತ್ರ—ಅಸಂಘಟಿತ ಹಾಗೂ ಗ್ರಾಮೀಣ ಕಾರ್ಮಿಕರು. ತುಂಬಾ ಕಾಲದಿಂದ ತುಂಬಾ ಅಸಡ್ಡೆಗೆ ಒಳಗಾಗಿರುವ ಈ ಕಾರ್ಮಿಕರಿಗೆ ಏನಾದರೂ ನಿಜವಾಗಿ

ಸಹಾಯ ಮಾಡಬೇಕೆಂಬ ರಾಜಕೀಯ ನಿರ್ಧಾರ ಸರ್ಕಾರಕ್ಕೆ ಇದ್ದುದಾದರೆ ಈ ಬಗ್ಗೆ ಸಲಹೆಗಳಿಗೇನೂ ಕೊರತೆಯಿಲ್ಲ. ಕನಿಷ್ಟ ಪ್ರಮಾಣದ ಸಾಮಾಜಿಕ ಭದ್ರತೆ ; ಸಂಘಟನೆ ಕಟ್ಟಲು ಅವರಿಗೆ ಕನಿಷ್ಟ ಅವಶ್ಯಕತೆಗಳ ಬಗ್ಗೆ ಖಾತರಿ ; ಇಷ್ಟು ಅವರ ಜರೂರಾದ ಅಗತ್ಯಗಳು. ಸರ್ಕಾರ ಈ ಬಗ್ಗೆ ಏನಾದರೂ ಕ್ರಮ ಕೈಗೊಳ್ಳುವುದೇ ಆದರೆ ಸಂಘಟಿತ ಕಾರ್ಮಿಕ ವರ್ಗ ತನ್ನ ಶಕ್ತಿಮೀರಿ ನೆರವು ನೀಡುವುದು.

ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಕಾರ್ಮಿಕರಿಗೆ ಹರಣವಾಗಿದ್ದ ಅವರ ಸ್ವಾತಂತ್ರ್ಯಗಳನ್ನು ಪುನಃ ನೀಡುವುದು ; ಕಡ್ಡಾಯ ಠೇವಣಾತಿ ಮೊತ್ತವನ್ನು ನಿಲ್ಲಿಸುವುದು ; ದಂಡನೆ ರೂಪದಲ್ಲಿ ವಜಾ ಆಗಿದ್ದ ಕಾರ್ಮಿಕರ ಪುನರ್ ನೇಮಕ. ಕನಿಷ್ಟ ಬೋನಸ್ ನೀಡಿಕೆ ಮುಂತಾದ ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ನಮ್ಮ ಮೆಚ್ಚಿಕೆ ವ್ಯಕ್ತಪಡಿಸದಿದ್ದರೆ ಕರ್ತವ್ಯ ಲೋಪವಾಗುತ್ತದೆ.

ಪರಿಸ್ಥಿತಿಯಲ್ಲಿ ಈಗ ಉಂಟಾಗಿರುವ ಗುಣಾತ್ಮಕ ಮಾರ್ಪಾಟಿನ ಕಾರಣವಾಗಿ ಸಾಮಾನ್ಯವಾಗಿ ಕಾರ್ಮಿಕ ಚಳುವಳಿಯ ಜವಾಬ್ದಾರಿ, ವಿಶೇಷವಾಗಿ ಹಿಂದ್ ಮಜದೂರ ಪಂಚಾಯತ್‌ನ ಜವಾಬ್ದಾರಿ ಹೆಚ್ಚಾಗಿದೆ. ಸರ್ಕಾರ ಬದಲಾವಣೆ ಆಗಿದೆ. ನಮಗೆ ಸಮಾಜ ಪರಿವರ್ತನೆ ಬೇಕು. ಸುದೀರ್ಘವಾಗಿ ಬಹುಬಾರಿ ಅಡ್ಡಾದಿಡ್ಡಿಯಾದ ಮಾರ್ಗದಲ್ಲಿ ಸಾಗುವ ರಾಜಕೀಯ ಮತ್ತು ಸೈದ್ಧಾಂತಿಕ ಹೋರಾಟ ನಡೆಯದೆ ಅಂತಹ ಪರಿವರ್ತನೆ ಸಾಧ್ಯವಿಲ್ಲ. ಈ ಹೋರಾಟದಲ್ಲಿ ಜನತಾ ಪಕ್ಷ ಮತ್ತು ಜನತಾ ಸರ್ಕಾರ ಸಹಾಯ ಹಾಗೂ ಮಾರ್ಗದರ್ಶನ ನೀಡಬೇಕು ಅತ್ಯಂತ ಸ್ಪಷ್ಟವಾಗಿ ಹೇಳಬೇಕೆಂದರೆ ಮಹಾಜನತೆ ಖಚಿತವಾಗಿ ಈ ಜವಾಬ್ದಾರಿಯನ್ನು ಜನತಾ ಪಾರ್ಟಿ ಮತ್ತು ಸರ್ಕಾರಕ್ಕೆ ವಹಿಸಿದೆ.

ಹಿಂದ್ ಮಜದೂರ್ ಪಂಚಾಯತಿಗೆ ನೇರವಾಗಿ ಸಂಬಂಧಿಸಿದ ಎರಡು ವಿಷಯಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸೋಣ. ಒಂದು ಕೇಂದ್ರ ಕಾರ್ಮಿಕರ ಸಂಘಗಳ 'ಏಕೀಕರಣ' ಹಾಗೂ ಕಾರ್ಮಿಕರ ಚಳುವಳಿಯ ಮುಖ್ಯಧಾರೆಯ ಸೃಷ್ಟಿ. ನಾವುಗಳು ಹಿಂದ್ ಮಜದೂರ ಸಭಾ (ತುರ್ತು ಪರಿಸ್ಥಿತಿ ವಿರೋಧಿ ತಂಡ) ಭಾರತೀಯ ಮಜದೂರ್ ಸಂಘ, ರಾಷ್ಟ್ರೀಯ ಮಜದೂರ ಸಂಘಟನೆ ಮತ್ತು ಇತರ ಕೆಲವು ತಂಡಗಳೊಡನೆ ಮಾತುಕತೆ ನಡೆಸುತ್ತಿದ್ದೇವೆ. ಸದ್ಯಕ್ಕೆ ತುರ್ತುಪರಿಸ್ಥಿತಿಗೆ ಅನುಕೂಲವಿದ್ದೂ ಸಹ ಪಶ್ಚಾತ್ತಾಪ ಪಡದೇ ಇರುವ ಕೆಲವು ಕೇಂದ್ರ ಸಂಘಟನೆಗಳನ್ನು

ಬಿಟ್ಟು ಇತರ ಎಲ್ಲ ಕೇಂದ್ರ ಸಂಘಟನೆಗಳ ಐಕ್ಯತೆಗಾಗಿ ನಾವು ಶ್ರಮಿಸಬೇಕು. ನಮ್ಮಂತೆಯೆ ಪರಿಸ್ಥಿತಿಯ ಒತ್ತಡಗಳನ್ನು ಇತರ ಸಂಘಟನೆಗಳನ್ನು ಮನಗಾಣುವರೆಂದು ಆಶಿಸೋಣ.

ಇನ್ನೊಂದು ಸಮಸ್ಯೆ ಹಿಂದ್ ಮಜದೂರ್ ಪಂಚಾಯತ್ ಅನ್ನು ಕೇಂದ್ರ ಕಾರ್ಮಿಕ ಮಂತ್ರಾಲಯ ಕಾಣುತ್ತಿರುವ ತಾರತಮ್ಯದ ರೀತಿ. ಉದಾಹರಣೆಗೆ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಗೆ ಪ್ರತಿನಿಧಿಗಳನ್ನು ಆರಿಸುವಾಗ ಸರ್ಕಾರ ನಮ್ಮನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಬೆಲೆ ಸೂಚ್ಯಂಕದ ವಿಮರ್ಶಾ ಸಮಿತಿಯಲ್ಲಿ ನಮ್ಮ ಪ್ರತಿನಿಧಿಗೆ ಸ್ಥಾನ ನೀಡಲಿಲ್ಲ. ಸಾಕಷ್ಟು ಹಿಂಬಲವಿರುವ ಒಂದು ಕೇಂದ್ರ ಕಾರ್ಮಿಕ ಸಂಘಟನೆ ಹಿಂದ್ ಮಜದೂರ್ ಪಂಚಾಯತ್. ಕೃಪಾಭಿಕ್ಷೆ ನಮಗೇನೂ ಬೇಡವೆಂದು ನಾವು ಸ್ಪಷ್ಟೀಕರಿಸುತ್ತೇನೆ. ಅದರೆ ನಮ್ಮನ್ನು ಅಲಕ್ಷ್ಯ ಮಾಡಿದರೆ, ನಾವು ನಮ್ಮ ಹಕ್ಕುಗಳಿಗಾಗಿ ಹೋರಾಡುತ್ತೇವೆ.